ವಿಷಯ : ಪಂಚಾಯತ್ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಿಗೆ ಭತ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 462 (689)

ಶ್ರೀ. ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :- ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವೀನವಾಗಿ ರಚಿತವಾದ ಪಂಚಾಯತ್ ಅಧ್ಯಕ್ಷರೂ ಹಾಗೂ ಉಪಾಧ್ಯಕ್ಷರುಗಳಿಗ ಭತ್ಯೆ ಕೊಡುವ ಯೋಜನೆ ಸರ್ಕಾರದ ಮುಂದಿದೆಯೇ;

ಆ) ಇದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು ?

ಶ್ರೀ. ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಯವರು) :-

ಅ) ಹೌದು.

ಆ) ಮಾಸಿಕ ವೇತನ ಮತ್ತು ಪ್ರಮಾಣ ಭತ್ಯೆ ಬಗ್ಗೆ ಪರಿಶೀಲಿಸಲಾಗುತ್ತಿದೆ. ಗ್ರಾಮ ಪಂಚಾಯತ್ ಸಭೆಗೆ ಹಾಜರಾದಾಗ ಪ್ರತಿ ದಿನಕ್ಕೆ ಇಪ್ಪತ್ತು ರೂ.ಗಳ ಉಪವೇಶನ ಫೀಜನ್ನು ಸದಸ್ಯರು ಪಡೆಯುತ್ತಾರೆ.

ವಿಷಯ : ಹಿರೇಕೆರೂರು ತಾಲೂಕಿನ ಗ್ರಾಮೀಣ ಪ್ರದೇಶದ ಬಸ್ಸುಗಳ ಮಾರ್ಗಗಳನ್ನು ರದ್ದು ಮಾಡುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 463(435)

ಶ್ರೀ ಬಿ.ಹೆಚ್ ಬನ್ನಿಕೋಡ್ (ಹಿರೇಕೆರೂರು):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಹುಬ್ಬಳ್ಳಿ ವಿಭಾಗದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಹಿರೇಕೆರೂರು ಘಟಕದಲ್ಲಿ ಎಷ್ಟು ಬಸ್ ಮಾರ್ಗಗಳನ್ನು ರದ್ದು ಪಡಿಸಲಾಗಿದೆ, ಅವುಗಳಲ್ಲಿ ಎಷ್ಟು ಬಸ್ ಮಾರ್ಗಗಳನ್ನು ಪುನಃ ಪ್ರಾರಂಬಿಸಲಾಗಿದೆ.

2. ಬೇರೆ ಯಾವುದೇ ಸಾರಿಗೆ ವ್ಯವಸ್ಥೆ ಇಲ್ಲದೆ ಗ್ರಾಮೀಣ ಪ್ರದೇಶದ ಜನರಿಗೆ ಬಸ್ ಮಾರ್ಗಗಳನ್ನು ರದ್ದುಪಡಿಸಿರುವುದರಿಂದ ಆಗಿರುವ ತೊಂದರೆಯ ಬಗ್ಗೆ : ಸರ್ಕಾರ ಗಮನಿಸಿದೆಯೇ: ಹಾಗೂ ಈ ಬಸ್ ಮಾರ್ಗಗಳನ್ನು ಪುನಃ ಪ್ರಾರಂಭಿಸಲು ಸರ್ಕಾರದ ಆದೇಶ ನೀಡಲಾಗುವುದೇ ;

3. ಸಾಮಾನ್ಯ ಬಸ್ ಸೌಕರ್ಯವಿಲ್ಲದ ಪ್ರದೇಶಗಳಲ್ಲಿ ತಡೆರಹಿತ ಬಸ್ಸುಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರಯಾಣಿಸಲು ಅವಕಾಶ : ನಿಲ್ಲಿಸಿರುವುದರಿಂದ ಆಗಿರುವ ತೊಂದರೆಯ ಬಗ್ಗೆ ಸರ್ಕಾರ ಗಮನಿಸಿದೆಯೇ ;